**ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.**

**ಸಿ. ಸಿ. ನಂಬರಃ 2408/2024**

**ಫಿರ್ಯಾದುದಾರರು** ದಿ. ಜನತಾ ಕೋ–ಅಪರೇಟಿವ್ ಕ್ರೆಡಿಟ್ ಸೊಸೈಟಿ, ಲಿಮಿಟೆಡ್, ಭಟ್ಕಳ ,ಮುರ್ಡೇಶ್ವರ ಶಾಖೆ, ಮಾವಳ್ಳಿ ಗ್ರಾಮ, ಭಟ್ಕಳ ತಾಲೂಕು ಪ್ರತಿನಿಧಿಸುವವರು, ಇದರ ಅಧಿಕೃತ ಪ್ರತಿನಿಧಿ/ ಶಾಖಾ ವ್ಯವಸ್ಥಾಪಕರು, ಶ್ರೀ ರಾಮಚಂದ್ರ ತಂದೆಃ ಮಂಜುನಾಥ ಹೆಗಡೆ

**– ವಿರುದ್ಧ –**

**ಆರೋಪಿತರು** ಶ್ರೀ ಫಜಲ್‌ವುಲ್ಲಾ ತಂದೆಃ ಶವುಲ್ಲಾ ಹಮೀದ ಮಣೆ,

**ಭಾರತೀಯ ನ್ಯಾಯ ಸಂಹಿತೆ ಕಲಂ.351 ರ ಅಡಿಯಲ್ಲಿ ಆರೋಪಿಯ ಹೇಳಿಕೆಃ–**

ಪ್ರಶ್ನೆ–1 : ಈ ಪ್ರಕರಣದಲ್ಲಿ ಪಿರ್ಯಾದುದಾರ ಸಾಕ್ಷಿದಾರರು ನುಡಿದ ಸಾಕ್ಷ್ಯವನ್ನು ಕೇಳಿದ್ದೀರಾ?

ಉತ್ತರ : ಹೌದು

ಪ್ರಶ್ನೆ–2 : ಚಾಸಾ–1/ಫ್ರಾಸಾ–1 ರಾಮಚಂದ್ರ ಮಂಜುನಾಥ ಹೆಗಡೆ ರವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ದಿನಾಂಕಃ 07–02–2019 ರಂದು ಪಿರ್ಯಾದಿ ಸಂಸ್ಥೆಯ ಮುರ್ಡೇಶ್ವರ ಶಾಖೆಯಿಂದ ರೂ.5,00,000/– (ರೂಪಾಯಿ ಐದು ಲಕ್ಷ ಮಾತ್ರ) ಹಣವನ್ನು ಕ್ಯಾಶ್ ಕ್ರೆಡಿಟ್ ಸಾಲವಾಗಿ ಸಾಲದ ಖಾತೆ ಸಂಖ್ಯೆ CC–270 ರಲ್ಲಿ ಪಡೆದುಕೊಂಡಿದ್ದು ಇರುತ್ತದೆ. ಶೇಕಡಾ 14% ವಾರ್ಷಿಕ ಬಡ್ಡಿ ಮತ್ತು ತಪ್ಪಿದಲ್ಲಿ 2% ಬಡ್ಡಿ ದರದಲ್ಲಿ ಒಪ್ಪಿಕೊಂಡು ಕೆಲವು ದಾಖಲೆ ಪತ್ರಗಳನ್ನು ಬರೆದುಕೊಟ್ಟಿದ್ದು ಇರುತ್ತದೆ. ಆದರೆ ಒಪ್ಪಿಕೊಂಡಂತೆ ಸದ್ರಿ ಸಾಲವನ್ನು ಅವಧಿಯೊಳಗೆ ಮಾಡಿದ್ದು ಇರುವುದಿಲ್ಲ ಎಂದು ಈ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರ : ಸಾಲ ಪಡೆದಿರುತ್ತೇನೆ. ಸಾಲ ಅರ್ಜಿ ಮತ್ತು ಇತರೆ ದಾಖಲಾತಿಗಳನ್ನು ಬರೆದು ಕೊಟ್ಟಿರುವುದಿಲ್ಲ.

ಪ್ರಶ್ನೆ–3 : ಫ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ,ದಿನಾಂಕಃ 08–08–2024 ರ ತನಕ ಅಸಲು ಬಡ್ಡಿ ಸೇರಿ ಒಟ್ಟೂ ರೂ. 7,16,838/–(ಅಸಲು ರೂ. 5,90,840/–, ಬಡ್ಡಿ ರೂ. 1,09,997/–, ದಂಡದ ಬಡ್ಡಿ ರೂ.16,001/–) ಬಾಕಿ ಇರುತ್ತದೆ. ನಂತರ ಸೆಟಲ್‌ಮೆಂಟ್ ಪ್ರಕಾರ ಸದ್ರಿ ಸಾಲದ ಹಣವನ್ನು ಮರುಪಾವತಿ ಮಾಡುವ ಸಲುವಾಗಿ ನೀವು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮುರ್ಡೇಶ್ವರ ಶಾಖೆಯ ಚೆಕ್ ನಂಬರ್ 967727 ನ್ನು ಒಟ್ಟೂ ರೂ. 7,16,500/–( ಏಳು ಲಕ್ಷದ ಹದಿನಾರು ಸಾವಿರದ ಐದುನೂರು ಮಾತ್ರ) ಕ್ಕೆ

ದಿನಾಂಕಃ 08-08-2024 ಎಂದು ನಮೂದಿಸಿ ಚೆಕ್‌ನ್ನು ನಿಪಿ-2 ರಂತೆ ಫಿರ್ಯಾದಿದಾರರಿಗೆ ನೀಡಿರುತ್ತೀರಿ ಎಂದು ಈ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರ : ಚೆಕ್ಕು ನೀಡಿಲ್ಲ . ಸಾಲ ಪಡೆದುಕೊಳ್ಳುವಾಗ ಚೆಕ್ಕು ಪಡೆದಿರುತ್ತಾರೆ.

ಪ್ರಶ್ನೆ-4 : ಫ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದ್ರಿ ದ್ರಿ ಚೆಕ್ಕನ್ನು ಫಿರ್ಯಾದಿ ಸೊಸೈಟಿಯವರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮುರ್ಡೇಶ್ವರ ಶಾಖೆಯಲ್ಲಿ ನಗಧೀಕರಣಕ್ಕಾಗಿ ಹಾಜರಪಡಿಸಿದಾಗ,"Funds Insufficient" ಎಂಬ ಹಿಂಬರಹದೊಂದಿಗೆ ಅಮಾನ್ಯಗೊಂಡು ನಿಪಿ-3 ರಂತೆ ದಿನಾಂಕಃ 19-08-2024 ರಂದು ವಾಪಸ್ಸು ಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರ : ಸುಳ್ಳು

ಪ್ರಶ್ನೆ-5 : ಫ್ರಾ.ಸಾ.1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಫಿರ್ಯಾದಿದಾರರು ದಿನಾಂಕಃ29-08-2024 ರಂದು ತಮ್ಮ ವಕೀಲರ ಮೂಲಕ ಲೀಗಲ್ ನೋಟಿಸನ್ನು ನಿಪಿ-4 ರಂತೆ ರಿಜಿಸ್ಟರ್ ಅಂಚೆ ಮುಖಾಂತರ ನಿಮಗೆ ಕಳುಹಿಸಿದ್ದು, ಸದ್ರಿ ಚೆಕ್ಕಿನಲ್ಲಿ ನಮೂದಿಸಿರುವ ಹಣವನ್ನು ನೋಟಿಸು ತಲುಪಿದ 15 ದಿನಗಳೊಳಗೆ ಮರು ಮಾಡುವಂತೆ ತಿಳಿಸಿದ್ದು, ಸದ್ರಿ ನೋಟಿಸ್ಸನ್ನು ನೀವು ಸ್ವೀಕರಿಸದೇ ದಿನಾಂಕಃ 11-09-2024 ರಂದು Unclaimed ಎಂದು ನಿಪಿ-6 ರಂತೆ ವಾಪಸ್ಸು ಬಂದಿರುತ್ತದೆ. ಆದರೆ ಇಂದಿನವರೆಗೂ ನೀವು ಚೆಕ್ಕಿನ ಹಣವನ್ನು ಪಾವತಿ ಮಾಡದೆ ಆ ಮೂಲಕ ನೆಗೋಶಿಯೇಬಲ್ ಇನ್ಸ್ಟುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಈ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳುತ್ತೀರಿ?

ಉತ್ತರ : ನೋಟಿಸ್ಸು ಬಂದಿಲ್ಲ.

ಪ್ರಶ್ನೆ-6 : ಈ ಮೊಕದ್ದಮೆಯಲ್ಲಿ ನೀವು ಬೇರೆ ಏನಾದರೂ ಹೇಳುವುದು ಇದೆಯಾ?

ಉತ್ತರ : ಇಲ್ಲ.

ಪ್ರಶ್ನೆ-7 : ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಅಥವಾ ಹಾಜರುಪಡಿಸಲು ದಾಖಲೆಗಳು ಏನಾದರೂ ಇದೆಯಾ?

ಉತ್ತರ : ಇದೆ.

(ಸಾಕ್ಷಿದಾರರ ಸಾಕ್ಷ್ಯವನ್ನು ಸಂಕ್ಷಿಪ್ತಗೊಳಿಸಿ ಆರೋಪಿತನಿಗೆ ತಿಳಿದಿರುವ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಲಾಗಿ ಸದ್ರಿ ಆರೋಪಿ ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಲಾಗಿದೆ.)

**ಸಹಿ ಇದೆ/-**

**(ಶ್ರೀಮತಿ.ಧನವತಿ)**

ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ನ್ಯಾಯಿಕ ದಂಡಾಧಿಕಾರಿ, ಭಟ್ಕಳ.

ದಿನಾಂಕಃ 19-02-20265.